

# ಅಂಗೈಯಲ್ಲಿ ಆಟ







**ಕ**ಲೆ ಎಲ್ಲಿ ಹುಟ್ಟುತ್ತದೆ? ಅದಕ್ಕೆ ಇಂತಹುದ್ದೇ ಸ್ಥಳ, ವಸ್ತು ಆಗಲೇಬೇಕೆಂದಿಲ್ಲ. 'ಕಲೆಗೆ ಸೃಜನಾತ್ಮಕ ತಲೆ ಇದ್ದರೆ ಸಾಕು' ಎನ್ನುತ್ತಾನೆ ಇಟಲಿಯ ಫ್ಲೋರೆನ್ಸಾದ ಕಲಾವಿದ 'ಮಾರಿಯೊ ಮಾರಿಯೊಟ್ಟಿ'.

ತನ್ನ ಅಂಗೈಯನ್ನೇ ಕಲೆಗೆ ಬಳಸಿಕೊಂಡ ಈ ಮಹಾನುಭಾವ ವಿವಿಧ ಕ್ರೀಡೆಗಳಲ್ಲಿ ತೊಡಗಿಕೊಂಡಿದ್ದಾನೆ. ಈತನು ಅಂಗೈಯಲ್ಲಿ ಬಿಡಿಸಿದ ಚಿತ್ರಗಳನ್ನು ಕಣ್ತುಂಬಿಕೊಂಡು ಜನ ಈ ಕಲಾವಿದನನ್ನು ಹಾಡಿ ಹೊಗಳುತ್ತಿದ್ದಾರೆ.

ರನ್ನಿಂಗ್ ರೇಸ್, ಫುಟ್ಬಾಲ್, ವಾಲಿಬಾಲ್ ಹಿಟ್ ಮಾಡುವುದು, ವೈಟ್ ಲಿಫ್ಟಿಂಗ್, ಬೋಟಿಂಗ್ ಹೀಗೆ ಎಲ್ಲ ಚಿತ್ರಗಳಿಗೂ ಈ ಕಲಾವಿದ ಅಂಗೈಯನ್ನೇ ಬಳಸಿಕೊಂಡಿದ್ದಾನೆ. ಕೈ ಬೆರಳುಗಳನ್ನೇ ಕಾಲು, ತಲೆ, ಕೈ ಹೀಗೆ ಹಲವಾರು ಅಂಗಗಳನ್ನಾಗಿ ಮಾಡುವಲ್ಲಿ ತನ್ನ ನೈಪುಣ್ಯತೆಯನ್ನು ಮೆರೆದಿದ್ದಾನೆ.

ಕ್ರೀಡೆಗಳಿಗಷ್ಟೇ ಮೀಸಲಾಗದೆ ಸಂಗೀತಕ್ಕೂ ಬೆರಳು ಹಾಕಿರುವ ಈ ಕಲಾವಿದ ತನ್ನ ಅಂಗೈಯಲ್ಲಿಯೇ ಹಾರ್ಮೋನಿಯಂ ನುಡಿಸುವುದು, ಸಂಗೀತ ನಿರ್ದೇಶನಕ ಪಾತ್ರ ವಹಿಸಿರುವುದು ನಿಜಕ್ಕೂ ಅದ್ಭುತವೇ ಸರಿ.

■ ವಸಂತ ಮಾಲವಿ